**ಕರ್ನಾಟಕ ಸರ್ಕಾರ**

**(ಪಿ.ಆರ್.ಪಿ.67)**

| |
|---|
| **ಹೇಳಿಕೆ ಹಾಳೆ** |
| **(ಆರ್.ಪಿ.ಸಂಖ್ಯೆ 57)** |
| **ನಮೂನೆ ಸಂಖ್ಯೆ 4** |

## ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ

## ಸ್ಪೆಷಲ್ ಕೇಸ್ ನಂಬರ್ : 103/2015

**ಫ್ರಾಸಾ- 7 ಚಾಸಾ- 9**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಕೃಷ್ಣಮೂರ್ತಿ |
| ತಂದೆಯ ಹೆಸರುಃ | : | ರಾಜಶೇಖರಯ್ಯ |
| ವಯಸ್ಸುಃ | : | 63 ವರ್ಷ |
| ಉದ್ಯೋಗಃ | : | ನಿವೃತ್ತ ಇಇ |
| ವಾಸ | : | ಬೆಂಗಳೂರು |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 05-07-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು 2013ರಿಂದ 2016ರವರೆಗೆ ನಾನು ಹಾಸನ ಲೋಕೋಪಯೋಗಿ ಇಲಾಖೆಯಲ್ಲಿ ಇಇ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2.ದಿಃ3-8-13ರಂದು ಹಾಸನ ಲೋಕಾಯುಕ್ತ ಪೊಲೀಸ್ ಅಧೀಕ್ಷಕರು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಹಾಸನ ಪಟ್ಟಣ ಪಂಚಾಯಿತಿಯ ಸಹಾಯಕ ಇಂಜಿನಿಯರ್ ಆಗಿದ್ದ ಆನಂದ್ ಮತ್ತು ಅವರ ಪತ್ನಿಯ ಹೆಸರಿನಲ್ಲಿ ಇದ್ದ ಕಟ್ಟಡದ ಮೌಲ್ಯಮಾಪನ ಮಾಡಿಕೊಡುವಂತೆ ಮನವಿ ಸಲ್ಲಿಸಿದ್ದರು. ಅದರಂತೆ ಉದಯಗಿರಿ ಬಡಾವಣೆಯ 2ನೇ ಕ್ರಾಸ್ ನಲ್ಲಿದ್ದ ಶ್ರೀಮತಿ ಹೆಚ್ ಕೆ ಶುಭ ಇವರ ಹೆಸರಿನಲ್ಲಿದ್ದ ಕಟ್ಟಡದ ಹಾಗೂ ಕುವೆಂಪುನಗರದಲ್ಲಿ ಆನಂದ್ ರವರ

ಹೆಸರಿನಲ್ಲಿದ್ದ ಎಲ್ ಐ ಜಿ ಕಟ್ಟಡದ ಮೌಲ್ಯಮಾಪನವನ್ನು ಮಾಡಿರುತ್ತೇನೆ. ಉದಯಗಿರಿಯ ಕಟ್ಟಡದ ನೆಲಮಹಡಿ ಮತ್ತು 1ನೇ ಮಹಡಿಯ ವಿಸ್ತೀರ್ಣ ತಲಾ 1802.43 ಚ ಅ ಇತ್ತು. ಕುವೆಂಪುನಗರದ ಎಲ್ ಐ ಜಿ ಕಟ್ಟಡದ ನೆಲಮಹಡಿಯ ವಿಸ್ತೀರ್ಣ 432.28 ಚ ಅ ಇತ್ತು. ಸದರಿ ಕಟ್ಟಡಗಳ ಮೌಲ್ಯಮಾಪನವನ್ನು ಕೇಂದ್ರ ಮೌಲ್ಯಮಾಪನ ಸಮಿತಿಯ ಅಧಿಸೂಚನೆ/ ವರದಿಯಂತೆ ಮಾಡಿರುತ್ತೇನೆ. ಈ ಬಗ್ಗೆ ನನ್ನ ವರದಿಯನ್ನು ದಿಃ23-11-2013ರ ಪತ್ರದೊಂದಿಗೆ ಲೋಕಾಯುಕ್ತ ಪೊಲೀಸ್ ಅಧೀಕ್ಷಕರಿಗೆ ನೀಡಿರುತ್ತೇನೆ. ಸದರಿ ಪತ್ರವನ್ನು ನಿಪಿ-57 ಎಂದು ಸಾಕ್ಷಿಯ ರುಜುವನ್ನು ನಿಪಿ-57(ಎ) ಎಂದು ಗುರುತಿಸಲಾಯಿತು. ಎರಡು ವರದಿಗಳನ್ನು ನಿಪಿ-58 ಮತ್ತು 59 ಎಂದು ಗುರುತಿಸಲಾಯಿತು. ಎರಡೂ ವರದಿಗಳ ಪ್ರತಿ ಪುಟಗಳಲ್ಲಿ ನನ್ನ ಸಹಿ ಇರುತ್ತದೆ. ಅವುಗಳನ್ನು ಒಟ್ಟಾಗಿ ಕ್ರಮವಾಗಿ ನಿಪಿ-58(ಎ) ಮತ್ತು ನಿಪಿ-59(ಎ) ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಆರೋಪಿ ಪರ** ಶ್ರೀ ಡಿ ಎಂ ಪಿ **ವಕೀಲರಿಂದಃ**

ಲೋಕೋಪಯೋಗಿ ಇಲಾಖೆಯು ನಿರ್ಧರಿಸುವ ಮೌಲ್ಯಮಾಪನದ ಶೇ10ರಷ್ಟು ಗುತ್ತಿಗೆದಾರರ ವೆಚ್ಚ ಮತ್ತು ಸೂಪರ್ವೈಸರ್ ರವರ ವೆಚ್ಚ ಸೇರಿರುತ್ತದೆ ಎಂದರೆ ನಿಜ. ಈ ಎರಡೂ ಕಟ್ಟಡಗಳಿಗೆ ಸಂಬಂಧಪಟ್ಟಂತೆ ಯಾರು ಗುತ್ತಿಗೆದಾರರಾಗಿದ್ದರು ಮತ್ತು ಯಾರು ಮೇಲ್ವಿಚಾರಣೆ ಮಾಡಿದ್ದರು ಎಂದು ನಾನು ತಿಳಿದುಕೊಂಡಿಲ್ಲ. ಮನೆ ಮಾಲೀಕರೇ ಕಟ್ಟದ ಮೇಲ್ವಿಚಾರಣೆ ಮಾಡಿದ್ದಲ್ಲಿ ಕಟ್ಟಡದ ಒಟ್ಟು ವೆಚ್ಚದಲ್ಲಿ ಶೇಃ 20 ರಷ್ಟು ಕಳೆಯಬೇಕು ಎಂದರೆ ನಿಜ. ಕುವೆಂಪುನಗರದ ಎಲ್ ಐ ಜಿ ಮನೆ ಆರೋಪಿತರು ಖರೀದಿಸುವುದಕ್ಕಿಂತ ಮೊದಲೇ ಕಟ್ಟಿತ್ತು ಎಂದರೆ ಸರಿ. ಲೋಕೋಪಯೋಗಿ ಇಲಾಖೆ ಯಾವುದೇ ಮೌಲ್ಯಮಾಪನ ಮಾಡಿ ವರದಿ ನೀಡುವುದಕ್ಕಿಂತ ಮೊದಲು ಆ ಸ್ಥಳವನ್ನು ಸ.ಕಾ.ಅ ಅಥವಾ ಕಿರಿಯ ಅಭಿಯಂತರರು ಸ್ಥಳ ಪರಿಶೀಲನೆ ಮಾಡಿ ಕಾರ್ಯಪಾಲಕ ಅಭಿಯಂತರರಿಗೆ ವರದಿ ನೀಡಬೇಕು, ನಂತರದಲ್ಲಿ ಕಾರ್ಯಪಾಲಕ ಅಭಿಯಂತರರು ಅದನ್ನು ಪರಿಶೀಲಿಸಿ ಅದನ್ನು ಕಳುಹಿಸುವುದು ಎಂದರೆ ಸರಿ.

ಯಾವುದೇ ಕಟ್ಟಡದ ಮೌಲ್ಯಮಾಪನ ಮಾಡುವಾಗ ಕಟ್ಟಡದ ಪ್ರತಿಹಂತದ ಮೌಲ್ಯಮಾಪನ ಮಾಡಬೇಕು ಹಾಗೂ ಅದಕ್ಕೆ ಅಳವಡಿಸಿದ ಫರ್ನಿಚರ್ ಇತ್ಯಾದಿಗಳ ಪ್ರತ್ಯೇಕ ಮೌಲ್ಯಮಾಪನ ಮಾಡಬೇಕು ಎಂದರೆ ಸಾಕ್ಷಿಯು ಅದು ಕಟ್ಟಡ ನಿರ್ಮಾಣ ಹಂತದಲ್ಲಿದ್ದರೆ ಮಾತ್ರ ಅನ್ವಯವಾಗುತ್ತದೆ,ಈ ಮನೆ ಆಗಲೇ ಕಟ್ಟಿ ಆಗಿದ್ದರಿಂದ ಕೇಂದ್ರ ಮೌಲ್ಯಮಾಪನ ಸಮಿತಿಯ ಅಧಿಸೂಚನೆಯಂತೆ ಮಾಡಬೇಕು ಎನ್ನುತ್ತಾರೆ. ಉದಯಗಿರಿ ಮನೆಯ ಒಟ್ಟು ಮೌಲ್ಯಮಾಪನ ಕೇವಲ 33 ಲಕ್ಷ ಆಗಿರುತ್ತದೆ, ಆದರೆ ನಾನು 38,75,224 ಎಂದು ಹೆಚ್ಚಾಗಿ ಕಾಣಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**